ಹೆಗಲಿಗೇರಿಸಿಕೊಂಡು ಹೊರಟು ಹೋದರು.

ನಾನು ಮರಳಿ ಸೋಫಾದಲ್ಲಿ ಹೋಗಿ ಕುಳಿತೆ. ಮಾರ್ಕೋ ಆ ಕೋಣೆಯಿಂದ ಹೊರ ಬರಲೇಬೇಕು, ನನ್ನನ್ನು ಎದುರಿಸಲೇ ಬೇಕು. ಅಲ್ಲಿಯ ತನಕ ಇಲ್ಲಿಂದ ಕದಲುವುದಿಲ್ಲ ಅಂತ ದೃಢವಾಗಿ ನಿಶ್ಚಯಿಸಿಕೊಂಡೆ.

ನಾನು ತುಂಬ ಹೊತ್ತು ಕಾಯಬೇಕಾಗಲಿಲ್ಲ. ಹತ್ತೇ ನಿಮಿಷದಲ್ಲಿ ಮಾರ್ಕೋ ಹೊರ ಬಂದ. ಒಂದು ಕುರ್ಚಿಯನ್ನೆಳೆದುಕೊಂಡು ನನ್ನ ಎದುರಿಗೇ ಕುಳಿತ.

"ಆಯಿ, ನಿನ್ನ ಹತ್ತಿರ ಒಂದು ವಿಷಯ ಹೇಳಬೇಕು." ಅವನ ದನಿ ಮೃದುವಾಗಿತ್ತು.

ಅದೆಷ್ಟೋ ವರ್ಷಗಳ ನಂತರ ಅವನು ಆಯಿ ಎಂದು ಕರೆದಿದ್ದಕ್ಕೆ ನನ್ನ ಮನಸ್ಸೂ ಆರ್ದ್ರವಾಯಿತು. ಅವನೊಂದಿಗೆ ಕದನಕ್ಕೆ ಸಿದ್ಧಳಾಗಿ ಕುಳಿತಿದ್ದೆ. ತದ್ವಿರುದ್ಧವಾದ ಈ ಸನ್ನಿವೇಶಕ್ಕೆ ತಯಾರು ಮಾಡಿಕೊಂಡಿರಲಿಲ್ಲ.

"ಏನಾಯ್ತು ಮಾರ್ಕೋ?"

"ಇವತ್ತು ಬಂದವರು, ಈ ಮೊದಲು ಬಂದವರು ಯಾರೂ ನನ್ನ ಸ್ನೇಹಿತರಲ್ಲ. ನನ್ನ ಕ್ಲಯಿಂಟ್‌ಗಳು."

ಕ್ಲಯಿಂಟ್ ಎಂಬ ಶಬ್ದ ಕೇಳಿದ ತಕ್ಷಣ ನನ್ನ ಎದೆ ಧಸ್ಸಕ್ಕೆಂದಿತು.

"ನನಗೊಂದು ಮ್ಯಾಜಿಕಲ್ ಶಕ್ತಿಯಿದೆ. ಎದುರಿಗಿದ್ದವರ ಮನಸ್ಸು ಅವರಿಗೆ ಏನನ್ನು ಹೇಳಲು ಹವಣಿಸುತ್ತಿದೆ ಎಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅವರ ಮನಸ್ಸಿನ ಭಾಷೆಯಲ್ಲಿಯೇ ಅವರಿಗೆ ಅದನ್ನು ಹೇಳಬಲ್ಲೆ."

"ಒಮ್ಮೆ ಆಂಡ್ರ್ಯೂ ಜೊತೆಗೆ ಓದುತ್ತಿದ್ದಾಗ ಅಕಸ್ಮಾತಾಗಿ ಈ ಶಕ್ತಿಯ ಬಗ್ಗೆ ನನಗೆ ತಿಳಿಯಿತು. ಅವನ ಗರ್ಲ್‌ಫ್ರೆಂಡಿನ ಜೊತೆಗೆ ಏನೋ ಜಗಳವಾಗಿತ್ತು. ಆ ಕುರಿತಾಗಿ ಅವನಿಗೆ ಏನು ಮಾಡಬೇಕು ಅಂತ ಗೊತ್ತಿರಲಿಲ್ಲ. ನಾನು ಒಂದು ಕ್ಷಣ ಯೋಚಿಸಿ ಸ್ಪಾನಿಷ್‌ನಲ್ಲಿ ಏನೋ ಬಡಬಡಿಸಿದೆ. ಆಂಡ್ರ್ಯೂನ ಮನೆಯ ಭಾಷೆಯದು. ನನಗೆ ಸ್ಪಾನಿಷ್ ಭಾಷೆಯ ಗಂಧಗಾಳಿಯೂ ಇಲ್ಲ. ಅಂದು ನಾನು ಹೇಳಿದ ಉಪಾಯ ಅವನಿಗೆ ಬಹಳ ಉಪಯುಕ್ತವಾಯಿತಂತೆ."

"ಈ ಸಂಗತಿಯನ್ನು ಅವನು ಇನ್ನೊಬ್ಬ ಸ್ನೇಹಿತನಿಗೆ ಹೇಳಿದ. ಅವನು ಇನ್ಯಾರಿಗೋ ಹೇಳಿ ಈ ವಿಷಯ ಎಲ್ಲ ಕಡೆಗೂ ಹರಡಿಬಿಟ್ಟಿದೆ. ಬೇರೆ ಬೇರೆ ಹೈಸ್ಕೂಲುಗಳಿಂದಲೂ ಹುಡುಗರು ಹುಡುಗಿಯರು ನನ್ನನ್ನು ಹುಡುಕಿಕೊಂಡು ಬರುತ್ತಿದ್ದಾರೆ."

"ಹೀಗೆ ಅವರ ಮನಸ್ಸನ್ನು ಓದುವ ಸಾಮರ್ಥ್ಯ ನಾನು ಏಕಾಂತದಲ್ಲಿ ಧೇನಿಸುವಾಗ ನನ್ನನ್ನೂ ಮೀರಿ ಬರುತ್ತದೆ. ವಿಚಿತ್ರವೆಂದರೆ ಸೂರ್ಯ ಮುಳುಗಿದ ಮೇಲೆ ಮಾತ್ರ ಈ ಶಕ್ತಿ ಕೆಲಸ ಮಾಡುತ್ತದೆ."

"ಯಾವ ವಿಷಯದ ಬಗ್ಗೆ ಪ್ರಶ್ನೆ ಕೇಳುತ್ತಾರೆ ಅವರು?"

"ಅವರು ಏನನ್ನೂ ಕೇಳೋದಿಲ್ಲ. ನಾನೇ ಅವರ ಕಣ್ಣಲ್ಲಿ ಕಣ್ಣಿಟ್ಟು ನೋಡಿ ನನ್ನ ಮನಸ್ಸಿಗೆ ಬಂದದ್ದನ್ನು ಹೇಳ್ತೀನಿ. ಅವರು ಶಾಕ್ ಆಗುವಷ್ಟು ಅದು ನಿಖರವಾಗಿರ್ತದೆ."

ನಾನು ಅವಾಕ್ಕಾಗಿ ಮಾರ್ಕೋನ ಮಾತುಗಳನ್ನು ಕೇಳುತ್ತಲೇ ಕುಳಿತಿದ್ದೆ. ತನ್ನ ಹಟ ಸಾಧಿಸಿಕೊಳ್ಳಲು ಯಾವ ಹಂತಕ್ಕೆ ಹೋಗುತ್ತಿದ್ದಾನೆ ಈ ಹುಡುಗ, ಕಣ್ಣಮುಂದೆಯೇ ಸುಳ್ಳಿನ ಮಾಲೆ ಹೆಣೆದು ತಾನೇ ಅದರಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾನಲ್ಲ ಅಂತ ಅಸಹ್ಯವಾಯಿತು. ಇವನ ವಾದವನ್ನು ಬುಡದಿಂದಲೇ ಅಲ್ಲಾಡಿಸಬೇಕು ಅಂತ ತೀರ್ಮಾನಿಸಿದೆ.

"ಹೀಗೆಲ್ಲ ಮಾತನಾಡಬಾರದು ಮಾರ್ಕೋ. ಹೀಗೆ ಮುಖಕ್ಕೆ ಹೊಡೆದ ಹಾಗೆ ಸುಳ್ಳು ಹೇಳಬಾರದು. ನಿನ್ನ ವಯಸ್ಸಲ್ಲಿ ಏನೇನೋ ಕುತೂಹಲಗಳಿರುತ್ತವೆ. ಅದೆಲ್ಲ ತಪ್ಪು ಅಂತ ನಾನು ಹೇಳುತ್ತಿಲ್ಲ. ಸತ್ಯ